# ಕಥೆಯೇ ಹೀರೊ ಆಗಿರಬೇಕು



'ಕಥೆಯೇ ಹೀರೊ ಆಗಿದ್ದರೆ ಸಿನಿಮಾ ಖಂಡಿತ ಗೆಲ್ಲುತ್ತದೆ. ಮೊದಲು ಕಥೆ ನಾಯಕನಂತಿರಬೇಕು' ಎನ್ನುವ ನಟ ರಿತ್ವಿಕ್ ಮಠದ್, ಅಂಥ ಗಟ್ಟಿ ಕಥೆಗಳನ್ನೇ ಅರಸುತ್ತಿರುವವರು. ರಿತ್ವಿಕ್ ಅಭಿನಯದ 'ಮಾರ್ನಮಿ' ಸಿನಿಮಾ ಫೆ. 20ಕ್ಕೆ ಬಿಡುಗಡೆಯಾಗುತ್ತಿದ್ದು, ಇದೇ ನೆಪದಲ್ಲಿ 'ಸುಧಾ'ದೊಂದಿಗೆ ಮಾತನಾಡಿದ್ದಾರೆ.

■ ಸುಮಲತಾ ಎನ್.

**◆ 'ಮಾರ್ನಮಿ' ಸಿನಿಮಾ ಹಾಗೂ ನಿಮ್ಮ ಪಾತ್ರದ ಪ್ರಾಮುಖ್ಯದ ಬಗ್ಗೆ ಹೇಳುವುದಾದರೆ...**

ಮಂಗಳೂರಿನಲ್ಲಿ ದಸರಾಗೆ 'ಮಾರ್ನಮಿ' ಎನ್ನುತ್ತಾರೆ. ಕರಾವಳಿ ಭಾಗದ ಪ್ರೇಮಕಥೆಯಿದು. ಮಂಗಳೂರಿನಲ್ಲಿ ಹುಲಿವೇಷ ಹಾಕುತ್ತಾರಲ್ಲ, ಆ ಗುಂಪಿನಲ್ಲಿರುವ ಸಾಮಾನ್ಯ ಹುಡುಗನೊಬ್ಬನ ಪಾತ್ರ. ಕುಟುಂಬ ಕಟ್ಟಿಕೊಳ್ಳುವ ಏಕೈಕ ಕನಸಿನೊಂದಿಗೆ ಜೀವನ ಮಾಡುತ್ತಿರುವ ಹುಡುಗ ಅವನು. ಹುಲಿವೇಷದ ಎಳೆಯ ಜೊತೆ ಜೊತೆಗೆ ಸಾಗುವ ಕಥೆ. ಅವನ ಕನಸು ನನಸಾಗುತ್ತಾ? ಅವನ ಕನಸಿಗೆ ಏನೇನು ಅಡೆತಡೆಗಳು ಬರುತ್ತವೆ? ಹುಲಿವೇಷದೊಂದಿಗೆ ಈ ಕಥೆ ಹೇಗೆ ತಳುಕು ಹಾಕಿಕೊಂಡಿದೆ? ಇವೆಲ್ಲವೂ ಕಥಾಹಂದರದಲ್ಲಿ ಸಾಗುತ್ತವೆ.

**◆ ಸಿನಿಮಾ ಬಿಡುಗಡೆ ಪದೇ ಪದೇ ಮುಂದೂಡಲು ಕಾರಣ...**

ಎರಡು ಬಾರಿ ಸಿನಿಮಾ ಬಿಡುಗಡೆ ದಿನಾಂಕವನ್ನು ಮುಂದೂಡಲಾಯಿತು. ಕಾರಣ, ಸಿನಿಮಾ ಪ್ರೊಮೋಷನ್. ನಾವಂದುಕೊಂಡಷ್ಟು ಪ್ರಚಾರ ಜನರಿಗೆ ತಲುಪಿಲ್ಲ ಎನಿಸಿತು. ನಟ ಸುದೀಪ್ ಅವರು ಕೂಡ ಸಿನಿಮಾ ಟ್ರೇಲರ್ ನೋಡಿ, ಈ ಸಿನಿಮಾಗೆ ಒಂದು ಸಾಮರ್ಥ್ಯ ಇದೆ, ರೀಚ್ ಮಾಡಿಸಿದರೆ ಒಳ್ಳೆಯ ಕಥೆ ಆಗುತ್ತದೆ ಎಂದರು. ಸಿನಿಮಾ ಬಿಡುಗಡೆಯಾಗಿ ಜನ ಬರಲಿಲ್ಲ ಎಂದು ದೂರುವುದಕ್ಕಿಂತ ಜನರಿಗೆ ಸಿನಿಮಾ ಬಗ್ಗೆ ಮಾಹಿತಿ ಸಿಕ್ಕ ನಂತರ ಬಿಡುಗಡೆ ಮಾಡಿದರೆ ಒಳ್ಳೆಯದು ಎಂದು ಸಮಯ ತೆಗೆದುಕೊಂಡೆವು.

**◆ ಕರಾವಳಿ ಕಥೆಗೆ ನೀವು ತಯಾರಾದದ್ದು ಹೇಗೆ?**

ನಾನು ಮೂಲತಃ ದಾವಣಗೆರೆಯವನು. ಕರಾವಳಿ ಭಾಗದ ಉಚ್ಚರಣೆ ರೂಢಿಯಿರಲಿಲ್ಲ. ಸಿನಿಮಾಗಾಗಿ ವರ್ಕ್‌ಶಾಪ್ ಇತ್ತು. ಆ ವರ್ಕ್‌ಶಾಪ್‌ನಲ್ಲಿ ಮಂಗಳೂರಿನ ಭಾಷೆ, ಹುಲಿವೇಷ, ಸ್ಥಳೀಯರ ಮ್ಯಾನರಿಸಂ ಬಗ್ಗೆ ಅಭ್ಯಾಸ ಮಾಡಿದೆ. ಹಾಗೇ ಮಂಗಳೂರು, ಅಲ್ಲಿನ ಮೀನು ಮಾರುಕಟ್ಟೆಯಂಥ ಕೆಲವು ಕಡೆಗಳಲ್ಲಿ ಓಡಾಡಿ ಅಲ್ಲಿನವರ ನಡೆ–ನುಡಿ ಬಗ್ಗೆ ಗಮನಿಸುತ್ತಿದ್ದೆ. ಇವೆಲ್ಲವೂ ಒಂದು ಐಡಿಯಾ ಕೊಟ್ಟವು.

**◆ ಧಾರಾವಾಹಿ– ಸಿನಿಮಾ ಎರಡನ್ನೂ ಸಮದೂಗಿಸಿದ ಪರಿ?**

ಧಾರಾವಾಹಿ, ಸಿನಿಮಾ ಎರಡಕ್ಕೂ ಏಕಕಾಲಕ್ಕೆ ಒಪ್ಪಿಗೆ ಕೊಟ್ಟಿದ್ದೆ. 15 ದಿವಸ ಧಾರಾವಾಹಿ, 15 ದಿನ ಸಿನಿಮಾದಲ್ಲಿ ತೊಡಗಿಕೊಳ್ಳುತ್ತಿದ್ದೆ. ಸಿನಿಮಾ ಪ್ಯಾಶನ್. ಧಾರಾವಾಹಿ ಅನ್ನ ಕೊಡುವ ಕೆಲಸ. ಎರಡನ್ನೂ ಬಿಟ್ಟುಕೊಡಲು ಮನಸ್ಸಿರಲಿಲ್ಲ. ಎರಡೂ ಪ್ರೊಡಕ್ಷನ್ ಹೌಸ್‌ಗಳ ಒಪ್ಪಿಗೆ ಮೇಲೆ ಎರಡರಲ್ಲೂ ತೊಡಗಿದ್ದೆ. ಧಾರಾವಾಹಿ ಶೂಟ್ ಮುಗಿಯುತ್ತಿದ್ದಂತೆ ಸಿನಿಮಾದ ಹಳೆಯ ಸೀನ್ ಸ್ಕ್ರಿಪ್ಟ್‌ಗಳನ್ನು ನೋಡಿಕೊಳ್ಳುತ್ತಿದ್ದೆ. ಒಂದು ಪಾತ್ರದಿಂದ ಮತ್ತೊಂದಕ್ಕೆ ಬದಲಾಗಬೇಕಿತ್ತು. ಎರಡನ್ನೂ ಪ್ರೀತಿಯಿಂದಲೇ ನಿಭಾಯಿಸಿದೆ.

**◆ ಯಾವ ಪಾತ್ರ ನಿಮಗೆ ಸವಾಲಿನದು ಎನಿಸುತ್ತದೆ?**

ಪ್ರತಿ ಪಾತ್ರವೂ ಚಾಲೆಂಜಿಂಗ್ ಆಗಿರುತ್ತದೆ. ನಮ್ಮದಲ್ಲದ ವ್ಯಕ್ತಿತ್ವವನ್ನು ನಟಿಸುವುದೇ ಸವಾಲು. ನಿರ್ದೇಶಕರು ಒಂದು ಪಾತ್ರ ಹೇಳಿದಾಗ ಅದು ಹೊಸತೇ ಆಗಿರುತ್ತದೆ. ಹೀಗಾಗಿ ಪ್ರತಿ ಹೊಸತು ಕೂಡ ಆ ಮಟ್ಟಿಗೆ ಸವಾಲೇ ಆಗಿರುತ್ತದೆ. ಕಲಾವಿದನಾಗಿ ಬಹಳಷ್ಟು ಪಾತ್ರವನ್ನು ಪ್ರಯತ್ನಿಸಬೇಕು ಎಂದಿದೆ. ಅದರಲ್ಲಿ ಸೈನಿಕನ ಪಾತ್ರ ಅಥವಾ ಕಥೆಯಲ್ಲಿ ತೊಡಗಿಕೊಳ್ಳುವ ಆಸೆಯಿದೆ.

ಕಥೆ ಪವರ್‌ಫುಲ್ ಆಗಿರಬೇಕು. ಅದೇ ಹೀರೊ ಆಗಿರಬೇಕು. ಹಾಗಿದ್ದರೆ ಆ ಸಿನಿಮಾ ಗೆಲ್ಲುತ್ತದೆ. ಕಥೆಯೇ ಎಲ್ಲ. ಪಾತ್ರಗಳೇನಿದ್ದರೂ ಆಮೇಲೆ.

**◆ ಧಾರಾವಾಹಿ ಹಿನ್ನೆಲೆಯ ಕಲಾವಿದರಿಗೆ ಸಿನಿಮಾರಂಗದಲ್ಲಿ ಅವಕಾಶಗಳು ಹೇಗಿವೆ?**

ಧಾರಾವಾಹಿ, ಸಿನಿಮಾ, ಯಾವ ನಟರಾದರೂ ಅವರು ಗುರುತಿಸಿಕೊಳ್ಳುವವರೆಗೂ ಅವಕಾಶಗಳು ಕಡಿಮೆ. ಒಬ್ಬ ಸ್ಟಾರ್ ನಟನ ಮುಂದೆ ತಿಂಗಳಿಗೆ ಎಷ್ಟೋ ಸ್ಕ್ರಿಪ್ಟ್‌ಗಳು ಬರುತ್ತವೆ. ಹೊಸಬರದ್ದು ಹಾಗಲ್ಲ. ಒಮ್ಮೆ ಯಶಸ್ಸು ಸಿಕ್ಕ ಮೇಲೆ ಅವಕಾಶ ಸಿಗುತ್ತದೆ. ಆದರೆ ಪ್ರಯತ್ನ ನಿರಂತರವಾಗಿ ಸಾಗುತ್ತಲೇ ಇರಬೇಕು.

**◆ 'ಮಾರ್ನಮಿ' ನಂತರ?**

ಎರಡು ಕಥೆಗಳನ್ನು ಕೇಳಿದ್ದೇನೆ. 'ಮಾರ್ನಮಿ' ಬಿಡುಗಡೆ ನಂತರ ಮುಂದಿನ ಹೆಜ್ಜೆ ಇಡುವೆ. ■